ತೆಗೆದುಕೊಳ್ಳುವುದೇ ಅಲ್ಲದೆ ತಪ್ಪಿತಸ್ಥರೆಂದು ಕಂಡು ಬಂದ ಅಧಿಕಾರಿಗಳ ಮೇಲೂ ಸಹ ಕಟ್ಟುನಿಟ್ಟಿನ ಕ್ರಮ ತೆಗೆದು ಕೊಳ್ಳಲಾಗುವುದು.

ಆಹಾರ ತನಿಖಾ ದಳ ಕುರಿತು

383 (1895): ಶ್ರೀ ಕೆ. ಕುಶಲ (ಸೂಳ್ಯ):–

ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಆಹಾರ ಮತ್ತು ನಾಗರೀಕ ಪೂರೈಕೆ ಇಲಾಖೆಯಲ್ಲಿ ಆಹಾರ ತನಿಖಾ ದಳದ ವತಿಯಿಂದ ಕಾರ್ಯ ಎಸಗುತ್ತಿದ್ದುದು ನಿಜವೇ;

ಆ. ಸದ್ರಿ ಆಹಾರ ತನಿಖಾ ದಳವನ್ನು ಪ್ರಕೃತ ಇಲಾಖೆ ತೆಗೆದುಹಾಕಿ ಕಂದಾಯ ಇಲಾಖೆಗೆ ವಹಿಸಿಕೊಟ್ಟಿರುವುದು ನಿಜವೇ;

ಇ. ಆಹಾರ ತನಿಖಾ ದಳವನ್ನು ಕಂದಾಯ ಇಲಾಖೆಗೆ ವಹಿಸಿ ಕೊಟ್ಟಿರುವುದರಿಂದ ವರ್ತಕರ ಮೇಲೆ ಹತೋಟಿ ಇಲ್ಲದೆ ತೊಂದರೆಯಾಗುವುದಿಲ್ಲವೆ;

ಈ. ಪೋಲೀಸು ಹತೋಟಿಯನ್ನು ಕೈಬಿಟ್ಟು ಕಂದಾಯ ಇಲಾಖೆಗೆ ವಹಿಸಿರುವುದರಿಂದ ಕಾಳಸಂತೆಕೋರರಿಗೆ (ವರ್ತಕರಿಗೆ) ಹೆಚ್ಚಿನ ಅವಕಾಶ ಕಲ್ಪಿಸಿದಂತಾಗಿರುವುದು ನಿಜವೆ; ಇದರ ಬಗ್ಗೆ ಸೂಕ್ತ ಕ್ರಮ ಏನಾದರೂ ಕೈಕೊಳ್ಳಲಾಗಿದೆಯೇ ?

ಶ್ರೀಮತಿ ಮನೋರಮ ಮದ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):–

ಅ.ಹೌದು.

ಆ. ಆಹಾರ ತನಿಖಾ ದಳವನ್ನು ರದ್ದುಪಡಿಸಲಾಗಿದ್ದರೂ ಅದರ ಕೆಲಸವನ್ನು ಕಂದಾಯ ಇಲಾಖೆಗೆ ವಹಿಸಿ ಕೊಟ್ಟಿರುವುದಿಲ್ಲ. ಈ ಹಿಂದೆ ಆಹಾರ ತನಿಖಾ ದಳಕ್ಕೆ ವಹಿಸಿಕೊಟ್ಟಿದ್ದ ಕೆಲಸ ಕಾರ್ಯಗಳನ್ನು ಈಗ ಆಹಾರ ಮತ್ತು ನಾಗರೀಕ ಸರಬರಾಜು ನಿರ್ದೇಶನಾಲಯಕ್ಕೆ ವಹಿಸಿಕೊಡಲಾಗಿದೆ.

ಇ. ಉದ್ಭವಿಸುವುದಿಲ್ಲ.

ಈ. ಉದ್ಭವಿಸುವುದಿಲ್ಲ.

ರಾಯಚೂರು ಜಿಲ್ಲೆಯಲ್ಲಿ ನಡೆದ ದರೋಡೆಗಳ ಸಂಖ್ಯೆ

388 (389): ಶ್ರೀ ಬಿ. ಹಂಪನಗೌಡ (ಸಿಂಧನೂರು):–

ಮಾನ್ಯ ಗೃಹ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1. 1992–93ನೇ ಸಾಲಿನಲ್ಲಿ ರಾಯಚೂರು ಜಿಲ್ಲೆಯಲ್ಲಿ ಎಷ್ಟು ದರೋಡೆಗಳು ಜರುಗಿಯಾಗಿವೆ ಹಾಗೂ ಪತ್ತೆಯಾದ ದರೋಡೆ ಪ್ರಕರಣಗಳ ಸಂಖ್ಯೆ ಎಷ್ಟು;

2. ಸಿಂಧನೂರು ತಾಲ್ಲೂಕಿನಲ್ಲಿ ಎಷ್ಟು ದರೋಡೆ ಪ್ರಕರಣಗಳಾಗಿವೆ;

3. ಎಷ್ಟು ಕಳ್ಳತನದ ಕೇಸುಗಳಾಗಿವೆ ಹಾಗೂ ಎಷ್ಟು ಕೊಲೆ ಪ್ರಕರಣಗಳಾಗಿವೆ ಮತ್ತು ಹೆಣ್ಣುಮಕ್ಕಳ ಮೇಲೆ ಅತ್ಯಾಚಾರವಾದ ಪ್ರಕರಣಗಳೆಷ್ಟು ?